**JANUARY 13, 2025**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿ ಜಾರಿ ಬಗ್ಗೆ, ಸಚಿವ ಸಂಪುಟ ತೀರ್ಮಾನ – ಮುಖ್ಯಮಂತ್ರಿ.**
- **ರೈತರ ಜಮೀನು ವಿಭಜನೆ ಕಾರ್ಯ ಸರಳೀಕರಿಸಲು, ದರಖಾಸ್ತು ಪೋಡಿ ಅಭಿಯಾನ, ಜಾರಿಗೆ.**
- **ಆಕಾಶವಾಣಿ ಧಾರವಾಡ ಕೇಂದ್ರದ ಅಮೃತ ಮಹೋತ್ಸವ: ಇಂದು ಸಂಜೆ, ಸೃಜನಾ ರಂಗ ಮಂದಿರದಲ್ಲಿ, ಪ್ರಧಾನ ಸಮಾರಂಭ.**
- **ಪ್ರಯಾಗ್‌ರಾಜ್ ಮಹಾ ಕುಂಭ ಮೇಳ; ಇಂದಿನಿಂದ ಭಾರತೀಯ ರೇಲ್ವೆಯಿಂದ, ಹದಿಮೂರು ಸಾವಿರ ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ.**

<><><>

**ಈಗ ವಾರ್ತೆಗಳ ವಿವರ**

<><><>

**ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿ ಬಗ್ಗೆ, ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ; 160 ಕೋಟಿ ರೂಪಾಯಿ ವೆಚ್ಚದಲ್ಲಿ ಸಿದ್ಧಪಡಿಸಲಾದ ವರದಿಯನ್ನು ಸ್ವೀಕರಿಸಲಾಗಿದೆ. ಈ ವರದಿಯನ್ನು ಜಾರಿಗೊಳಿಸುವ ಬಗ್ಗೆ, ಸಚಿವ ಸಂಪುಟ ತೀರ್ಮಾನಿಸಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಪಡಿಸಿದ್ದಾರೆ. ವಿಜಯನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮರಾಜಪೇಟೆಯಲ್ಲಿ ರಾಸುಗಳಿಗೆ ಹಿಂಸೆ ನೀಡಿರುವ ಘಟನೆ, ಅತ್ಯಂತ ಅಮಾನವೀಯ. ಬೆಂಗಳೂರು ಪೊಲೀಸ್ ಆಯುಕ್ತರಿಗೆ, ಸೂಕ್ತ ನಿರ್ದೇಶನ ನೀಡಿದ್ದು, ಕಠಿಣ ಕ್ರಮಕ್ಕೆ ಸೂಚಿಸಲಾಗಿದೆ ಎಂದರು.**

<><><>

**ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ಸ್ಥಳಕ್ಕೆ ಭೇಟಿ ನೀಡಿ, ಹೇಯ ಕೃತ್ಯವನ್ನು ಖಂಡಿಸಿದರು.**

<><><>

ಇದಕ್ಕೂ ಮುನ್ನ ಮುಖ್ಯಮಂತ್ರಿಯವರು, ವಿಜಯನಗರ ಜಿಲ್ಲೆ, ಬಂಡಿಹಳ್ಳಿಯಲ್ಲಿ ಆಯೋಜಿಸಿದ್ದ, 'ಸರ್ವ ಧರ್ಮ ಸಾಮೂಹಿಕ ವಿವಾಹ' ಸಮಾರಂಭದಲ್ಲಿ ಭಾಗವಹಿಸಿ, ನವಜೋಡಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯದ 'ಸಾಂಸ್ಕೃತಿಕ ನಾಯಕ' ಬಸವಣ್ಣನವರ 12ನೇ ಶತಮಾನದಲ್ಲಿ, ಅಂತರ್ಜಾತಿ ವಿವಾಹ ಪ್ರಚಲಿತದಲ್ಲಿತ್ತು. ಇದರಿಂದಾಗಿ ಸಮಾಜದಲ್ಲಿನ ಜಾತಿ ವ್ಯವಸ್ಥೆ ಅಳಿದು, ಸಮ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ಅವರು ಪ್ರತಿಪಾದಿಸಿದರು.

<><><>

ರೈತರ ಜಮೀನು ವಿಭಜನೆ ಕಾರ್ಯ ಸರಳೀಕರಿಸಲು, ರಾಜ್ಯ ಸರ್ಕಾರ ಆರಂಭಿಸಿದ ದರಖಾಸ್ತು ಪೋಡಿ ಅಭಿಯಾನದಡಿ, ರಾಮನಗರ ಜಿಲ್ಲೆ ಕನಕಪುರದ ದೊಡ್ಡಆಲಹಳ್ಳಿಯಲ್ಲಿ, ಪೋಡಿ ದುರಸ್ತಿ ಮತ್ತು ಹೊಸ ಪಹಣಿ ದಾಖಲಾತಿಗಳನ್ನು, ಜಮೀನುಗಳ ಮಾಲಿಕರಿಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ವಿತರಿಸಿದರು. ಬಳಿಕ ಮಾತನಾಡಿದ ಅವರು, ದರಖಾಸ್ತು ಪೋಡಿ ಅಭಿಯಾನ, ಇಡೀ ದೇಶಕ್ಕೆ ಮಾದರಿಯಾಗಿದೆ. ರೈತರು ಸೇರಿದಂತೆ ಜನರಿಗೆ ಅನುಕೂಲವಾಗಲೆಂದು, ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನ ನಡೆಯುತ್ತಿದೆ ಎಂದರು. ಈ ವ್ಯವಸ್ಥೆಯಿಂದ, ಗ್ರಾಮ ಲೆಕ್ಕಾಧಿಕಾರಿ ಸೇರಿದಂತೆ, ಮತ್ತಿತರ ಕಚೇರಿಗಳಿಗೆ ರೈತರು ಸೇರಿದಂತೆ, ಜನಸಾಮಾನ್ಯರು ಅಲೆದಾಡುವುದು ತಪ್ಪುತ್ತದೆ ಎಂದು ಉಪ ಮುಖ್ಯಮಂತ್ರಿ ತಿಳಿಸಿದರು.

<><><>

ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಮಟೂರು ಬಾಳಪ್ಪ ಸೇರಿದಂತೆ, ಬಹುಪಾಲು ಪ್ರಥಮ ಸ್ವಾತಂತ್ರ್ಯ ಹೋರಾಟಗಾರರು, ಕಿತ್ತೂರು ಕರ್ನಾಟಕದವರೇ ಆಗಿರುವುದು, ಹೆಮ್ಮೆಯ ಸಂಗತಿ ಎಂದು, ಶಾಸಕ ಮಹಾಂತೇಶ ಕೌಜಲಗಿ ತಿಳಿಸಿದ್ದಾರೆ. ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲೂಕು ರಾಯಣ್ಣನ ಸಂಗೊಳ್ಳಿಯ ಶಾಲಾ ಆವರಣದಲ್ಲಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವದ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಿತ್ತೂರು ಕಲ್ಮಠದ ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿ, ರಾಣಿ ಚನ್ನಮ್ಮ ಹಾಗೂ ರಾಯಣ್ಣನವರ ದಿಟ್ಟತನ ಯುವ ಪೀಳಿಗೆಗೆ ಮಾದರಿ ಎಂದರು.

<><><>

ಆಕಾಶವಾಣಿ ಧಾರವಾಡ ಕೇಂದ್ರ, ಕಳೆದ 8ನೇ ತಾರೀಖು, ಸಾರ್ವಜನಿಕ ಪ್ರಸಾರ ಸೇವೆಯ, ಸಾರ್ಥಕ 75 ವರ್ಷಗಳನ್ನು ಪೂರ್ಣಗೊಳಿಸಿತು. ತನ್ನಿಮಿತ್ತ ಇಂದು ಸಂಜೆ 5.30ಕ್ಕೆ, ಧಾರವಾಡದ ಸೃಜನಾ ಡಾಕ್ಟರ್ ಅಣ್ಣಾಜಿರಾವ್ ಸಿರೂರ ರಂಗಮಂದಿರದಲ್ಲಿ, 'ಅಮೃತ ಮಹೋತ್ಸವ' ಪ್ರಧಾನ ವೇದಿಕೆ ಕಾರ್ಯಕ್ರಮ ಆಯೋಜಿತವಾಗಿದೆ. 'ಆಕಾಶವಾಣಿಯ ಅಮೃತ ಘಳಿಗೆ' ವಿಶೇಷ ಸ್ಮರಣ ಸಂಚಿಕೆಯನ್ನು ಗಣ್ಯರು ಬಿಡುಗಡೆ ಗೊಳಿಸಲಿದ್ದಾರೆ.

<><><>

ಧಾರವಾಡ ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗದ, ಸಂಪಾದಕೀಯ ಕಾರ್ಯನಿರ್ವಾಹಕ ವಿವೇಕಾದಿತ್ಯ ಅವರಿಂದ, ಈ ಕುರಿತು ಮುನ್ನೋಟ ವರದಿ..

<><><>

*ಧಾರವಾಡ ಆಕಾಶವಾಣಿ ಕೇಂದ್ರದ ಅಮೃತ ಮಹೋತ್ಸವದ ಮುಖ್ಯ ಅಥಿತಿಗಳಾಗಿ, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಅಥಿತಿಗಳಾಗಿ ಬೆಳಗಾವಿಯ ಕೆ.ಎಲ್.ಇ. ಸೊಸೈಟಿ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹಾಗೂ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಪಿ.ಎಲ್.ಪಾಟೀಲ ಪಾಲ್ಗೊಳ್ಳಲಿದ್ದಾರೆ.*

*ಉನ್ನತ ಶ್ರೇಣಿಯ ಪಿಟೀಲು ಕಲಾವಿದರಾದ ಪಂಡಿತ ಬಿ.ಎಸ್.ಮಠ ಹಾಗೂ ವಿದುಷಿ ಅಕ್ಕಮಹಾದೇವಿ ಹಿರೇಮಠ ವಾಯೋಲಿನ್ ಜುಗಲ್‌ಬಂದಿ ಪ್ರಸ್ತುತ ಪಡಿಸಲಿದ್ದಾರೆ.*

*ಪದ್ಮಶ್ರೀ ಪಂಡಿತ ಎಂ. ವೆಂಕಟೇಶಕುಮಾರ ಅವರು, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿ ಕೊಡಲಿದ್ದಾರೆ.*

*ಗೋವಿಂದ ಮಣ್ಣೂರ ಅವರು ರಚಿಸಿದ ಹಾಸ್ಯ ನಾಟಕ, 'ಮೊಬೈಲ್ ಮಾವ' ಸುರೇಖಾ ಸುರೇಶ ಅವರ ನಿರ್ದೇಶನದಲ್ಲಿ ಮೂಡಿಬರಲಿದೆ. ನಿಲಯದ ಮುಖ್ಯಸ್ಥರು ಹಾಗೂ ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಕೆ.ಅರುಣ ಪ್ರಭಾಕರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು, ನಿಲಯದ ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ್ ತಿಳಿಸಿದ್ದಾರೆ.*

*ಕಳೆದ 6 ದಶಕಗಳಿಂದ, ಧಾರವಾಡ ಆಕಾಶವಾಣಿ ಕೇಂದ್ರದೊಂದಿಗೆ, ಅವಿನಾಭಾವ ಸಂಬಂಧ ಹೊಂದಿರುವ, ಎ ಟಾಪ್ ಶ್ರೇಣಿ ಪಿಟೀಲು ಕಲಾವಿದರಾದ, ವಿದುಷಿ ಅಕ್ಕಮಹಾದೇವಿ ಹಿರೇಮಠ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.*

<><><>

ವಿವೇಕ ಹಾಗೂ ವಿದುಷಿ ಅಕ್ಕಮಹಾದೇವಿ ಧ್ವನಿ **50 + 50** ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯಲಿರುವ, ಮಹಾ ಕುಂಭಮೇಳಕ್ಕೆ, ಇಂದಿನಿಂದ ಫೆಬ್ರವರಿ 26ರ ವರೆಗೆ ಯಾತ್ರಾರ್ಥಿಗಳಿಗಾಗಿ, ನೈಋತ್ಯ ರೇಲ್ವೆ ಸೇರಿದಂತೆ, ಭಾರತೀಯ ರೇಲ್ವೆ, 13 ಸಾವಿರ ವಿಶೇ ' ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದೆ. ಮಹಾಕುಂಭ ಮೇಳ ಇಂದು, ಪು ್ಯ ಹುಣ್ಣಿಮೆಯ ಮೊದಲ ಅಮೃತ ಸ್ನಾನದೊಂದಿಗೆ ಆರಂಭವಾಗಲಿದೆ. ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಭಕ್ತರು ಪವಿತ್ರ ಸ್ನಾನ ಮಾಡಲಿದ್ದಾರೆ. ಫೆಬ್ರವರಿ 26ರ ವರೆಗೆ ಐತಿಹಾಸಿಕ ಕುಂಭಮೇಳ ನಡೆಯಲಿದೆ.

<><><>

ವಿಶ್ವಾದ್ಯಂತ 5 ಸಾವಿರ ಸಸ್ಯ ಪ್ರಭೇದಗಳಿದ್ದು, ಆ ಪೈಕಿ ಸಾವಿರದ 600 ಪ್ರಭೇದಗಳು, ಪಶ್ಚಿಮಘಟ್ಟದಲ್ಲಿ ಮಾತ್ರ ಕಾಣ ಸಿಗುತ್ತವೆ ಎಂದು, ಕೆನರಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ವಿ. ವಸಂತ ರೆಡ್ಡಿ ತಿಳಿಸಿದ್ದಾರೆ. ಜೀವ ವೈವಿಧ್ಯ ಮಂಡಳಿ ಕಾರವಾರದಲ್ಲಿ ಆಯೋಜಿಸಿದ್ದ, 'ಜೀವ ವೈವಿಧ್ಯತೆ ಸಂರಕ್ಷಣೆ', ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು. ಇಡೀ ದೇಶದಲ್ಲೇ ಅಪರೂಪದ ಜೀವ ವೈವಿಧ್ಯತೆ ಉತ್ತರಕನ್ನಡ ಜಿಲ್ಲೆ ಹೊಂದಿದೆ ಎಂದರು.

<><><>

ಗದಗ ಜಿಲ್ಲೆ ರೋಣ ತಾಲೂಕಿನ, ಜಕ್ಕಲಿ ಗ್ರಾಮದ ಬಸ್ ನಿಲ್ದಾಣದಲ್ಲಿ, ರೋಣ  ಶಾಸಕ ಜಿ.ಎಸ್. ಪಾಟೀಲ 'ಪುಸ್ತಕದ ಗೂಡು'  ಉದ್ಘಾಟಿಸಿದರು. ತಾಲೂಕಿನ 22 ಗ್ರಾಮ ಪಂಚಾಯ್ತಿಗಳಲ್ಲಿ ಪುಸ್ತಕದ ಗೂಡು ರೂಪಿಸಲಾಗುತ್ತಿದೆ. ಗ್ರಾಮಸ್ಥರು ಹಾಗೂ ಶಾಲಾ ಮಕ್ಕಳು, ಸದುಪಯೋಗ ಪಡೆದುಕೊಳ್ಳುವಂತೆ, ತಿಳಿಸಿದರು.

<><><>

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಿರುವ ವಿಶೇಷ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಾಡೋಜ ಹಂ.ಪ. ನಾಗರಾಜಯ್ಯ, 'ಮನೆಗೊಂದು ಗ್ರಂಥಾಲಯ ಯೋಜನೆ'ಗೆ ಚಾಲನೆ ನೀಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ, 'ಕುಮಾರವ್ಯಾಸ ಭಾರತ'ದ ಸಂಪುಟಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ, ಪರೀಕ್ಷಾ ಪೇ ಚರ್ಚಾ 8ನೇ ಆವೃತ್ತಿಗೆ, ದೇಶ, ವಿದೇಶಗಳ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋ 'ಕರು ಸೇರಿ, 2 ಕೋಟಿ 70 ಲಕ್ಷಕ್ಕೂ ಅಧಿಕ ಜನ ಹೆಸರು ನೋಂದಾಯಿಸಿದ್ದಾರೆ.  ಮೈ ಜಿಒವಿ ಡಾಟ್ ಇನ್ ನಲ್ಲಿ, ಆನ್ ಲೈನ್ ನೋಂದಣಿ ಪ್ರಕ್ರಿಯೆ ನಾಳೆ 14ರ ವರೆಗೆ ನಡೆಯಲಿದೆ. ಪರೀಕ್ಷೆಗೆ ಸಂಬಂಧಿಸಿದ ಒತ್ತಡವನ್ನು, ಕಲಿಕೆ ಮತ್ತು ಹಬ್ಬದಾಚರಣೆಯಾಗಿ ಪರಿವರ್ತಿಸುವ, ರಾಷ್ಟವ್ಯಾಪಿ ಆಂದೋಲನವಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸ್ವಾಮಿ ವಿವೇಕಾನಂದರ 162ನೇ ಜನ್ಮ ದಿನ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಹಿನ್ನೆಲೆ, ಬೆಂಗಳೂರಿನ ಬಸವೇಶ್ವರ ನಗರದ, ಹಾವನೂರು ವೃತ್ತದಿಂದ, ಶಂಕರಮಠದ ವಿವೇಕಾನಂದ ಉದ್ಯಾನದ ವರೆಗೆ, ಯುವ ಜಾಗೃತಿ ನಡಿಗೆ ನಡೆಯಿತು.

<><><>

ಹೊಸ ದಿಲ್ಲಿಯ ಭಾರತ ಮಂಟಪದಲ್ಲಿ ಆಯೋಜಿಸಿದ್ದ, ರಾಷ್ಟ್ರೀಯ ಯುವಜನೋತ್ಸವದಲ್ಲಿ, ರಾಜ್ಯದ 43 ವಿದ್ಯಾರ್ಥಿಗಳು ಹಾಗೂ 33 ಸಾಂಸ್ಕೃತಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಯುವಜನೋತ್ಸವದಲ್ಲಿ ಮಂಡ್ಯ ಜಿಲ್ಲೆಯ ಡೊಳ್ಳು ಕುಣಿತ ಮತ್ತು ಜಾನಪದ ಸಮೂಹ ಗೀತೆ ತಂಡಕ್ಕೆ, ಎರಡನೇ ಸ್ಥಾನ ದೊರೆತಿದೆ.

<><><>

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು, ಕಲ್ಕುಣಿ ಗ್ರಾಮದಲ್ಲಿ ನಿರ್ಮಿಸಲಾದ, 'ಬೌದ್ಧ ಅಂಬೇಡ್ಕರ್ ಮಹಾದ್ವಾರ'ವನ್ನು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

<><><>

ದಾವಣಗೆರೆ ಜಿಲ್ಲಾ ಪೊಲೀಸ್ ಆಯೋಜಿಸಿದ್ದ, ರಸ್ತೆ ಸುರಕ್ಷತೆ ಮಾಸಾಚರಣೆಯನ್ನು, ಚಿತ್ರ ನಟ ಮಂಡ್ಯ ರಮೇಶ ಉದ್ಘಾಟಿಸಿ, ಸಂಚಾರ ನಿಯಮ ಪಾಲನೆ ಬಗ್ಗೆ, ಜನ ಜಾಗೃತಿ ಮೂಡಿಸಿದರು.

<><><>

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಧಾರವಾಡ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ವಿವಿಧ ವಾರ್ಡ್‌ಗಳಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ಆರೋಗ್ಯಾಕಾಂಕ್ಷಿಗಳ ಕುಶಲ ವಿಚಾರಿಸಿದರು.

<><><>

ಮೈಸೂರಿನ ಕರ್ನಾಟಕ ಕಲಾ ಮಂದಿರದಲ್ಲಿ, ನಾಳೆ 14 ರಿಂದ ಆರು ದಿನಗಳ ರಾಷ್ಟ್ರೀಯ ಬಹುರೂಪಿ ನಾಟಕೋತ್ಸವ ಆಯೋಜಿತವಾಗಿದೆ ಎಂದು, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ತಿಳಿಸಿದ್ದಾರೆ.

<><><>

ಜವಾಹರ ನವೋದಯ ವಿದ್ಯಾಲಯದ 2025–26 ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಇದೇ 18 ರಂದು ಬೆಳಗ್ಗೆ 11.30 ರಿಂದ ಮಧ್ಯಾಹ್ನ 1.30ರ ವರೆಗೆ ಜಿಲ್ಲಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿ ಜಾರಿ ಬಗ್ಗೆ, ಸಚಿವ ಸಂಪುಟ ತೀರ್ಮಾನ – ಮುಖ್ಯಮಂತ್ರಿ.
- ರೈತರ ಜಮೀನು ವಿಭಜನೆ ಕಾರ್ಯ ಸರಳೀಕರಿಸಲು, ದರಖಾಸ್ತು ಪೋಡಿ ಅಭಿಯಾನ, ಜಾರಿಗೆ.
- ಆಕಾಶವಾಣಿ ಧಾರವಾಡ ಕೇಂದ್ರದ ಅಮೃತ ಮಹೋತ್ಸವ; ಇಂದು ಸಂಜೆ, ಸೃಜನಾ ರಂಗ ಮಂದಿರದಲ್ಲಿ, ಪ್ರಧಾನ ಸಮಾರಂಭ.
- ಪ್ರಯಾಗ್‌ರಾಜ್ ಮಹಾ ಕುಂಭ ಮೇಳ; ಇಂದಿನಿಂದ ಭಾರತೀಯ ರೇಲ್ವೆ, ಸಾವಿರದ ಐನೂರು ವಿಶೇ ’ ರೈಲುಗಳ ಸಂಚಾರಕ್ಕೆ ವ್ಯವಸ್ಥೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>